




ಉಮಾ ರಾವ್

ಸೇರಿದ ಜೀರಿಗೆ, ಮೆಂತ್ಯ, ಕಡಲೆಹಿಟ್ಟಿನ ಅದ್ಭುತ ಘಮ. ಮನೆಯೆಲ್ಲಾ ಪಸರಿಸಿ ಬಾಯಲ್ಲಿ ನಿರೂರಿಸಿತ್ತು.

ಅಂದಿನಿಂದ ನಾನಿ ಮಾಲತಿಯ ಮನೆಯವರೇ ಆಗಿಬಿಟ್ಟಿದ್ದರು. ಬೆಳಿಗ್ಗೆ ಅವರ ಮೊದಲನೇ ಮಹಡಿಯ ಬಾಲ್ಕಾನಿಯಿಂದ ದಾರಕ್ಕೆ ಕಟ್ಟಿದ ಬುಟ್ಟಿ ಇಳಿಬಿಟ್ಟು, ಕೆಳಗೆ ಬಂದು ನಿಲ್ಲುತ್ತಿದ್ದ ತರಕಾರಿ ಗಾಡಿಯವನೊಡನೆ ವ್ಯಾಪಾರ. ಇನ್ನೂರು ಗ್ರಾಂ ಬೀನ್ಸ್, ಕಾಲು ಕಿಲೋ ಟಮಾಟರ್, ಅರ್ಧ ಕಿ.ಲೋ. ಆಲೂ... ಹಾಗೆ. ಜೊತೆಗೆ ಪುಕ್ಕಟೆ ಮಸಾಲಾ ನೆನಪಿಸಲು ಮರೆಯುತ್ತಿರಲಿಲ್ಲ. ಕರಿಬೇವು, ಕೊತ್ತಂಬರಿ, ಶುಂಠಿಗಳನ್ನು ತರಕಾರಿ ಕೊಂಡಾಗ ಪುಕ್ಕಟೆ ಕೊಡುತ್ತಿದ್ದ ಕಾಲ ಅದು. ಒಂದೊಂದು ಪೈಸಾಗೂ ಎರಡೆರಡು ಬಾರಿ ಲೆಕ್ಕ. ಸುತ್ತ ಮುತ್ತಲಿನವರೆಲ್ಲ, 'ಬಹುತ್ ಕಂಜೂಸ್ ಹೈ ಬುಡ್ಡೀ... ಸಿಂಧಿ ಹೈ ನಾ...' ಎಂದು ಕಿಸಕಸನೆ ನಗುತ್ತಿದ್ದರು. ಒಂದು ಸಂಜೆ ನಾನಿ ಮಾಲತಿಯ ಬಾಲ್ಕನಿಯಲ್ಲಿ ಕೂತು ಮಾತಾಡುತ್ತಿದ್ದಾಗ ಅದೇನೋ ತಮ್ಮ ಹಿಂದಿನ ಬದುಕಿನ ಸುರುಳಿ ಬಿಚ್ಚಿದ್ದರು. ದೇಶ ವಿಭಜನೆ ಸಮಯದಲ್ಲಿ ಆದ ಭಯಾನಕ ಗಲಭೆಯಲ್ಲಿ ರಾತ್ರೋ ರಾತ್ರಿ ಗುಂಡಾಗಳು